**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ183/2023 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **18.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ **ಸಿ.ಆರ್.ಕೆ** ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ದಿನಾಂಕ **28.02.2020** ರ ವಚನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, ನಿಪಿ-**1** ರಲ್ಲಿರುವ ಪ್ರತಿವಾದಿ ಸಹಿಯನ್ನು ನಿಪಿ-**1** ಎ ಎಂದು, ಸಾಕ್ಷಿಗಳಾದ ಎಂ.ಸಿ ಮೋಹನಕುಮಾರ ಮತ್ತು ಪಂಚಲಿಂಗೇಗೌಡರವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**1** ಬಿ ರಿಂದ ನಿಪಿ-**1** ಸಿ ಎಂದು, ಬಿಕ್ಲಂ ಯಶೋಧಮ್ಮರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-**1** ಡಿ ಎಂದು ಗುರುತಿಸಲಾಯಿತು.

ನಾನು ದಿನಾಂಕ **28.08.2020** ರ ಹಣ ಸಂದಾಯ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**2** ಎಂದು, ನಿಪಿ-**2** ರಲ್ಲಿರುವ ಪ್ರತಿವಾದಿ ಸಹಿಯನ್ನು ನಿಪಿ-**2** ಎ ಎಂದು, ಸಾಕ್ಷಿಗಳಾದ ಎಂ.ಸಿ ಮೋಹನಕುಮಾರ ಮತ್ತು ಪಂಚಲಿಂಗೇಗೌಡರವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**2** ಬಿ ರಿಂದ ನಿಪಿ-**2** ಸಿ ಎಂದು, ಬಿಕ್ಲಂ ಯಶೋಧಮ್ಮರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-**2** ಡಿ ಎಂದು, ದಿನಾಂಕ **12.06.2023** ರ ನೋಟಿಸನ ಕಛೇರಿ ಪ್ರತಿಯನ್ನು ನಿಪಿ-**3** ಎಂದು, ಅಂಚೆ ರಸೀದಿಯನ್ನು ನಿಪಿ-**4** ಎಂದು, ನೋಟಿಸ ತಲುಪಿರುವ ಬಾಬ್ತು ಅಂಚೆ ಕಛೇರಿಯವರು ನೀಡಿರುವ ಅಂಚೆ ಕಛೇರಿಯ ಹಿಂಬರಹವನ್ನು

ನಿಪಿ-**5** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ **ಸಿ.ಆರ್.ಕೆ** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**